




## ಸುಬ್ಬು ಹೊಲೆಯಾರ್

ಕಲೆ: ವಿಠ್ಠಲಪ್ಪ ಶಂ. ಹೂಗಾರ






# ಕಸ ಬಿದ್ದಿದೆ ನೆಲದ ಕಣ್ಣಿಗೆ

ಮರದೆಲೆಗಳು ಎಳೆಯಾಗಿ ಹಸಿರಾಗಿ
ಹಣ್ಣಾಗಿ ಉದುರಿ ಬಿದ್ದ ಸದ್ದಿಗೆ
ನೆಲ ಹಗುರಾಗಿ ನವಿಲಾಗಿ ಕುಣಿದು
ಚಿತ್ರ ಬಿಡಿಸಿದ ಹೆಜ್ಜೆಗಳು ಹೆಗಲಮೇಲೆ

ನಿಮ್ಮ ಯಾವ ಮಾತಿಗೆ
ಹೂ ಅರಳಿ ಇಬ್ಬನಿ ಹೊದ್ದು ತೇಲಾಡಿದೆ
ನಿಮ್ಮಬ್ಬರಕ್ಕೆ ಉಬ್ಬರಕ್ಕೆ ನಿರ್ಲಜ್ಜ ನಡೆಗೆ
ಉಡುಗಿ ಹೋಗಿದೆ ನೆಲ
ಮುಜುಗರ ಬೇಡವೆ
ನೆಲದ ಪಿಸುಮಾತಿಗೆ ಕಿವಿಯಾಗದಿದ್ದರೆ ಹೇಗೆ?

ನೋಡಿದ್ದೀರ ಆನೆಯನ್ನ
ಇರುವೆಯನ್ನ ಕೇಳಿದ್ದೀರ
ಚಿಟ್ಟೆಗಿಂತ ಸುಂದರವಾಗಿದ್ದೀರಾ ನೀವು
ಕಣ್ಣು ಕಿವಿಗಳಿದ್ದರೆ ತಾನೇ
ಕಸ ಬಿದ್ದಿದೆ ನೆಲದ ಕಣ್ಣಿಗೆ



ಮುಟ್ಟಿಸುತ್ತೀರ ಎಲ್ಲಿಗೆ ಇದೆಲ್ಲವನ್ನ
ಗಾಳಿ ಸೋಕದ ಜೀವವೇ ನಿಮ್ಮದು
ಮಗುವನ್ನು ಆಚೆಗಿಟ್ಟು
ನಿಂತ ನೆಲದ ಕನ್ನಡಿಯಲ್ಲಿ
ಉಸಿರಾಡುವ ಬಣ್ಣವೇನೆಂದು ಹೇಳುತ್ತೀರಿ?
ಬೆಳಕು ಮೈಲಿಗೆಯೇ ದೇವರೇ...